ದಿನಾಂಕಃ 15.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ರಿಂದ 4 ನೇ ಪ್ರತಿವಾದಿ ಪರ ಶ್ರೀ ಎಮ್.ಎಸ್.ಆರ್. ವಕೀಲರಿಂದ:**

ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ನಾನು ಪ್ರಸ್ತುತ ಪ್ರಕರಣದಲ್ಲಿ ನನ್ನ ಜಮೀನಿನ ಸ್ವಾಧೀನಾನುಭವಕ್ಕೆ ಪ್ರತಿವಾದಿಯವರು ತೊಂದರೆಕೊಡಬಾರದು ಎಂದು ಆದೇಶವನ್ನು ಕೋರಿರುತ್ತೇನೆ. ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ನಾನು ಅವಿಧ್ಯಾವಂತನಾದ ಕಾರಣ ಓದಿ ತಿಳಿದುಕೊಂಡಿರುವುದಿಲ್ಲ. ಕೆ.ಕೆಳಗೂರು ಗ್ರಾಮದ ಸ.ನಂ.52 ರಲ್ಲಿ ಒಟ್ಟು ಎಷ್ಟು ಜಮೀನಿಗೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಸ.ನಂ. ನಲ್ಲಿ ಆಶ್ರಯ ನೀವೇಶನಕ್ಕೆ 2 ಎಕರೆ ಜಮೀನು ಮಂಜೂರಾಗಿರುತ್ತದೆ. ನಾಗನಮಕ್ಕಿ ಮತ್ತು ಕಾರಕ್ಕಿಯ ಎರಡು ಪ್ರದೇಶವೂ ಸ.ನಂ.52 ರಲ್ಲಿ ಬರುತ್ತವೆ ಎಂದರೆ ಸರಿ. ಆಶ್ರಯ ನಿವೇಶನವು ಕಾರಕ್ಕಿಯ ಪ್ರದೇಶದಲ್ಲಿ ಬರುತ್ತದೆ. ಆಶ್ರಯ ನಿವೇಶನದಲ್ಲಿ 23 ನಿವೇಶನಗಳ ಹಂಚಿಕೆಯಾಗಿರುತ್ತದೆ. ಸದರಿ ನಿವೇಶನದಲ್ಲಿ 6 ರಿಂದ 8 ಕುಟುಂಬಗಳು ವಾಸವಿರುತ್ತವೆ. ನಾನು 4 ಎಕರೆ 30 ಗುಂಟೆ ಜಮೀನಿನ ಮಂಜೂರಾತಿಗಾಗಿ ಪಾರ್ಮ್ ನಂ.57 ರಲ್ಲಿ ಅರ್ಜಿಯನ್ನು ಕೊಟ್ಟಿರುತ್ತೇನೆ. ನಾನು ಕೃಷಿ ಮಾಡಿರುವ 3 ಎಕರೆಗೆ ನಕಾಶೆಯನ್ನು ತಯಾರಿಸಲಾಗಿರುತ್ತದೆ. ನಾನು ಮಾಲತಃ ಸುಂಕಸಾಲೆಯ ನಿವಾಸಿ ಎಂದರೆ ಸರಿಯಲ್ಲ.

ಕಾರಕ್ಕಿ, ನಾಗನಮಕ್ಕಿ, ಲೂಡ್ಸ್ ಎಸ್ಟೇಟ್, ಮಲ್ಲಿಗೆ ಹನಿ ಎಸ್ಟೇಟ್ , ಕೆ.ಕೆಳಗೂರಿನ ಮತದಾನ ಬೂತ್ ಗೆ ಸೇರುತ್ತದೆ ಎಂದರೆ ಸರಿ. 2018 ನೇ ಸಾಲಿನ ಮತದಾನವನ್ನು ನಾನು ಕೆ.ಕೆಳಗೂರಿನ ಮತದಾನ ಬೂತ್ ನಲ್ಲಿ ಮತದಾನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪತ್ನಿ ಶೋಭ ಕೆ. ಕೆಳಗೂರಿನ ಗ್ರಾಮ ಪಂಚಾಯ್ತಿಯ ಮಾಜಿ ಸದಸ್ಯೆ ಎಂದರೆ ಸರಿ. ಸ.ನಂ.52 ರಲ್ಲಿ ನನ್ನ ಪತ್ನಿಯ ಹೆಸರಿಗೆ ಒಂದು ನಿವೇಶನ ಹಂಚಿಕೆಯಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಹಿಂತಿರುಗಿಸಿರುತ್ತೇವೆ ಎಂದು ನುಡಿಯುತ್ತಾರೆ. ಆಶ್ರಯ ನಿವೇಶನದಲ್ಲಿ ಇನ್ನು ಹಲವು ಖಾಲಿ ನಿವೇಶನಗಳು ಇರುತ್ತವೆ ಎಂದರೆ ಸರಿ. ಸದರಿ ನಿವೇಶನದಲ್ಲಿ 6 ನಿವೇಶನಕ್ಕೆ ಆಗುವಷ್ಟು ಜಾಗವನ್ನು ನಾನು ಅತಿಕ್ರಮಿಸಿ ಕಾಫೀ ಬೆಳೆಯನ್ನು ಬೆಳೆಯುತ್ತಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ ನಮ್ಮ ಮತ್ತು ಪ್ರತಿವಾದಿಯವರ ವಿರುದ್ಧ ಗಲಾಟೆಯಾಗಿರುತ್ತದೆ ಎಂದರೆ ಸರಿಯಲ್ಲ. ನಿವೇಶನದ ಬಾಬ್ತು ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿರುವುದಿಲ್ಲ. ಜಾಗದ ಕುರಿತಾಗಿ ಒಂದು ಕ್ರಿಮಿನಲ್ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸ.ನಂ.52 ನ್ನು ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿಯಾಗಿ ಮೋಜಣಿ ಮಾಡಿ ಕಂದಾಯ ಇಲಾಖೆಯವರು ಸ್ವಲ್ಪ ಜಾಗವನ್ನು ಅರಣ್ಯ ಇಲಾಖೆಗೆ ಮಂಜೂರು ಮಾಡುವಂತೆ ತೀರ್ಮಾನಿಸಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ನಾನು ಪಾರ್ಮ್ ನಂ.57 ರಲ್ಲಿ ಮಂಜೂರಾತಿ ಕೋರಿ ಸಲ್ಲಿಸಿರುವ ಜಮೀನು ಅರಣ್ಯ

ಪ್ರದೇಶಕ್ಕೆ ಸೇರುತ್ತದೆ ಎಂದರೆ ಸರಿಯಲ್ಲ. ಸ.ನಂ.52 ರಲ್ಲಿ ನಾನು ಕೃಷಿ ಮಾಡಿದ ಜಾಗವನ್ನು ಅರಣ್ಯ ಇಲಾಖೆಯವರು 2 ವರ್ಷದ ಹಿಂದೆ ತೆರವುಗೊಳಿಸಿದ ಬಗ್ಗೆ ನನಗೆ ನೆನಪಿರುವುದಿಲ್ಲ. ನಿಪಿ-3 ರಿಂದ 6 ನನ್ನ ಪತ್ನಿ ಶೋಭ ರವರ ಹೆಸರಿನಲ್ಲಿ ಪಾವತಿಸಲಾಗಿರುತ್ತದೆ ಎಂದರೆ ಸರಿ. ಸದರಿ ತೆರಿಗೆಯನ್ನು ಗ್ರಾಮ ಪಂಚಾಯ್ತಿಗೆ ಪಾವತಿಸಲಾಗಿರುತ್ತದೆ ಎಂದರೆ ಸರಿ. ಸದರಿ ನಿಶಾನೆಗೂ ದಾವಾ ಸ್ವತ್ತಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-7 ರಿಂದ 9 ಜನಸ್ಪಂದನ ಸಮಯದಲ್ಲಿ ನೀಡಿದ ಅರ್ಜಿಯ ಹಿಂಬರಹ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ಯಾವ ವಿಷಯದ ಕುರಿತು ಅರ್ಹಿ ಸಲ್ಲಿಸಲಾಗಿರುತ್ತದೆ ಎಂದು ನಮೂದಿಸಲಾಗಿರುವುದಿಲ್ಲ ಎಂದರೆ ಸರಿ. ಜನಸ್ಪಂದನ ಸಮಯದಲ್ಲಿ ಯಾರು ಬೇಕಾದರು ಯಾವುದಾದರೂ ವಿಷಯದ ಕುರಿತು ಅರ್ಜಿ ಸಲ್ಲಿಸಬಹುದು ಎಂದರೆ ಸರಿ. ಸದರಿ ನಿಶಾನೆಗೂ ಈ ದಾವೆಗೂ ಒಂದಕ್ಕೊಂದು ಸಂಭಂದ ಇಲ್ಲ ಎಂದರೆ ಸರಿಯಲ್ಲ. ನಿಪಿ-10 ನ್ನು ಯಾವ ದಿನಾಂಕದಂದು ತಯಾರಿಸಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-10 ನ್ನು ತಯಾರಿಸುವ ಸಮಯದಲ್ಲಿ ಸಂಬಂಧಪಟ್ಟಂತಹ ಕಂದಾಯ ಅಧಿಕಾರಿಗಳು ಹಾಜರಿದ್ದರು.

ಮೋಜಣಿಗೆ ಬರುವ ಪೂರ್ವದಲ್ಲಿ ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ಮೋಜಣಿ ಕ್ರಮವನ್ನು ಜಿ.ಪಿ.ಎ. ಮುಖಾಂತರ ಮಾಡಲಾಗಿರುತ್ತದೆ. ಬಗರ್ ಹುಕುಂ ಅಡಿಯಲ್ಲಿ ಜಮೀನನ್ನು ಮಂಜೂರು ಮಾಡುವಾಗ ತಹಶೀಲ್ದಾರ್ ರವರು ಆದೇಶವನ್ನು ಮಾಡಬೇಕು ಮತ್ತು ಸದರಿ ಆದೇಶದ ಸಂಖ್ಯೆಯು ನಕಾಶೆಯಲ್ಲಿ ನಮೂದಿಸಬೇಕು ಎಂಬ ವಿಷಯ ನನಗೆ ತಿಳಿದಿರುವುದಿಲ್ಲ. ನಿಪಿ-10 ರಲ್ಲಿ ತಹಶೀಲ್ದಾರ್ ಸಂಖ್ಯೆ ಖಾಲಿ ಇರುತ್ತದೆ ಎಂದರೆ ಸರಿ. ಸದರಿ ನಕಾಶಯ ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-10 ನ್ನು ಪ್ರಸ್ತುತ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಪೂರ್ವದಲ್ಲಿಯೇ ನಿಪಿ-10 ನ್ನು ತಯಾರಿಸಲಾಗಿರುತ್ತದೆ ಎಂದು ಹೇಳಲು ಯಾವುದೇ ಪುರಾವೆ ಇಲ್ಲ ಎಂದರೆ ಸರಿ. ನಿಪಿ-10 ನ್ನು ಕಛೇರಿಯಲ್ಲಿ ಕುಳಿತು ತಯಾರಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಬಗರ್ ಹುಕುಂ ರಡಿಯಲ್ಲಿ ಜಮೀನು ಮಂಜೂರಾಗುವ ಪೂರ್ವದಲ್ಲಿ ವಿ.ಎ ಮತ್ತು ಆರ್.ಐ ರವರು ಸ್ಥಳ ಪರಿಶೀಲನೆ ಮಾಡಬೇಕು ಎಂಬ ವಿಷಯ ನನಗೆ ತಿಳಿದಿರುವುದಿಲ್ಲ ಆದರೆ ಸಾಕ್ಷಿಯು ಮುಂದುವರೆದು ನಾನು ಅವರಿಗೆ ಅರ್ಜಿಯನ್ನು ನೀಡಿರುತ್ತೇನೆ ಮತ್ತು ಅವರುಗಳು ಸ್ಥಳ ಪರಿಶೀಲನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿಯವರು ಸ್ಥಳ ಪರಿಶೀಲನೆ ಮಾಡಿದ ಬಾಬ್ತು ಯಾವುದೇ ವರದಿಯನ್ನು ನೀಡಿರುವುದಿಲ್ಲ. ಆ ರೀತಿಯಾಗಿ ವಿ.ಎ ಮತ್ತು ಆರ್.ಐ ರವರು ಯಾವುದೇ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಹಾಗಾಗಿ ಯಾವುದೇ ವರದಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯವರು ಸ.ನಂ.52 ರಲ್ಲಿ 1 ಎಕರೆ ಜಮೀನಿನ ಸ್ವಾಧೀನಾನುಭವದಲ್ಲಿದ್ದು ಅದರ ಮಂಜೂರಾತಿಗಾಗಿ ನಮೂನೆ 57 ರಲ್ಲಿ ಅರ್ಜಿಯನ್ನು ನೀಡಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಜಮೀನಿಗೆ ನಾನು ದಿ.22.03.2023 ರಂದು ಅತಿಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ 4 ನೇ ಪ್ರತಿವಾದಿಯವರ ಜಮೀನಿಗೆ ಅತಿಕ್ರಮ

ಪ್ರವೇಶ ಮಾಡಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಎ ಸ್ವತ್ತು ನನ್ನ ಹೆಸರಿಗೆ ಮಂಜೂರಾಗಿರುವುದಿಲ್ಲ ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.